## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 660(759) |
| ಸದಸ್ಯರ ಹೆಸರು | : | ಶ್ರೀ ಹೆಚ್. ಪಿ. ಸುಧಾಮ್ ದಾಸ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 18.08.2025 |
| ಉತ್ತರಿಸುವವರು | : | ಮಾನ್ಯ ಉನ್ನತ ಶಿಕ್ಷಣ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಾಲೇಜು ಶಿಕ್ಷಣ ಇಲಾಖೆಯ ಕೇಂದ್ರ ಅಥವಾ ಆಡಳಿತಾತ್ಮಕ ಕಛೇರಿಗಳಲ್ಲಿ ನಿಯೋಜನೆ ಮೇಲೆ ಕೆಲಸ ಮಾಡುತ್ತಿರುವ ಕಾಲೇಜು ಪ್ರಾಧ್ಯಾಪಕರುಗಳ ಒಟ್ಟು ಸಂಖ್ಯೆ ಎಷ್ಟು; ಈ ಪ್ರಾಧ್ಯಾಪಕರುಗಳನ್ನು ಯಾವ ಮಾನದಂಡದ ಆಧಾರದ ಮೇಲೆ ಕಛೇರಿ ಕೆಲಸಕ್ಕೆ ನಿಯೋಜಿಸಲಾಗಿದೆ; ಇವರಿಗೆ ಯು.ಜಿ.ಸಿ ವೇತನವೋ ಅಥವಾ ರಾಜ್ಯ ಸರ್ಕಾರದ ವೇತನವೋ ಎಂಬುದರ ಬಗ್ಗೆ ವಿವರ ನೀಡುವುದು; | ಕಾಲೇಜು ಶಿಕ್ಷಣ ಇಲಾಖೆಯ ಕೇಂದ್ರ ಕಛೇರಿಯಲ್ಲಿ ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಂದ ಒಟ್ಟು 16 ಬೋಧಕರು ಅನ್ಯ ಕಛೇರಿ ಕರ್ತವ್ಯದ ಮೇರೆಗೆ ಕಾರ್ಯನಿರ್ವಹಿಸುತ್ತಿರುತ್ತಾರೆ.<br><br>ಸದರಿ ಬೋಧಕರನ್ನು ಇಲಾಖೆಯ ವಿವಿಧ ಕ್ರಿಯಾ ಯೋಜನೆಗಳನ್ನು ಸಕಾಲದಲ್ಲಿ ಅನುಷ್ಠಾನಗೊಳಿಸುವ ಸಂಬಂಧ ಆಡಳಿತಾತ್ಮಕ ಹಿತದೃಷ್ಟಿಯಿಂದ ಕಾರ್ಯನಿರ್ವಹಿಸಲು ನಿಯುಕ್ತಿಗೊಳಿಸಲಾಗಿರುತ್ತದೆ. ಸದರಿ ಬೋಧಕರು ಯು.ಜಿ.ಸಿ. ವೇತನ ಪಡೆಯುತ್ತಿರುತ್ತಾರೆ. |
| ಆ) | ಕಾಲೇಜು ಕಲಿಕಾ ನಿರ್ವಹಣೆ (ಎಲ್‌ಎಮ್‌ಎಸ್) ವ್ಯವಸ್ಥೆಗೆ ಕಾಲೇಜು ಶಿಕ್ಷಣ ಇಲಾಖೆಯಿಂದ ಬಿಡುಗಡೆಯಾದ ಹಣ ಎಷ್ಟು ಹಾಗೂ ಕಾಲೇಜು ಕಲಿಕಾ ನಿರ್ವಹಣೆ (ಎಲ್‌ಎಮ್‌ಎಸ್) ವ್ಯವಸ್ಥೆಗೆ ಬೇಕಾದ ಪರಿಕರ ಮತ್ತು ಅನುಕೂಲಗಳನ್ನು ಈ ಕಾಲೇಜುಗಳಿಗೆ ಕಲ್ಪಿಸಲಾಗಿದೆಯೇ? | ಸರ್ಕಾರದ ಆದೇಶ ಸಂಖ್ಯೆ: ಇಡಿ 135 ಹೆಚ್‌ಪಿಸಿ 2020, ದಿನಾಂಕ:23.09.2020ರಲ್ಲಿ ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿನ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, 87 ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳು ಮತ್ತು 14 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಡಿಜಿಟಲ್ ಕಲಿಕೆಯ ಅಂಗವಾಗಿ ಕರ್ನಾಟಕ ಕಲಿಕಾ ನಿರ್ವಹಣಾ ವ್ಯವಸ್ಥೆಯ(KLMS) ನಿರ್ಮಾಣ ಮತ್ತು ಮೂರು ವರ್ಷಗಳ ನಿರ್ವಹಣೆಗೆ (ಪರಿಕಲ್ಪನೆ, ಅಭಿವೃದ್ಧಿ ಮತ್ತು ಅನುಸ್ಥಾಪನೆ, ನಿಯಮಿತ ಅಪ್ ಗ್ರೇಡೇಶನ್, ನಿರ್ವಹಣೆ, ತಾಂತ್ರಿಕ ಬೆಂಬಲ ಮತ್ತು ಕ್ಲೌಡ್ ಸಂಗ್ರಹಣೆಗಳಿಗೆ) ಒಟ್ಟು ರೂ.400.78 ಲಕ್ಷಗಳ ವೆಚ್ಚವಾಗಿದೆ.<br><br>ಕರ್ನಾಟಕ ಎಲ್.ಎಂ.ಎಸ್. ವ್ಯವಸ್ಥೆಗೆ ಪೂರಕವಾಗಿ ಪ್ರೊಜೆಕ್ಟರ್‌ಗಳು, 1 ಕೆ.ವಿ.ಎ. ಯುಪಿಎಸ್ (4 ತಾಸುಗಳ ಬ್ಯಾಕ್‌ಅಪ್), ಆಂಡ್ರಾಯ್ಡ್ ಬಾಕ್ಸ್‌ಗಳು ಮತ್ತು ನಿರಂತರ ವೈ.ಫೈ. ಸೌಲಭ್ಯವನ್ನು ಒಳಗೊಂಡಿರುವ 2020-21ನೇ ಸಾಲಿನಲ್ಲಿ 2500 ಮತ್ತು 2021-22ನೇ ಸಾಲಿನಲ್ಲಿ 6500 ಒಟ್ಟಾರೆಯಾಗಿ 9000 ಸ್ಮಾರ್ಟ್ ತರಗತಿಗಳನ್ನು ಅನುಸ್ಥಾಪಿಸಲಾಗಿದೆ. |

**ಸಂಖ್ಯೆ:ಇಡಿ 330 ಡಿಸಿಇ 2025(ಇ)**

(ಡಾ. ಎಂ. ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು